# ಒಂದು ಸುಳ್ಳು ಉಪ್ಪಿನಕಾಯಿ ಕಂತೆ



■ ಕೆ. ಶ್ರೀನಿವಾಸರಾವ್

ಹರಪನಹಳ್ಳಿ ಎಂಬುದೊಂದು ಊರು. ಹುಸೇನಭಟ್ಟ ಎಂಬುವವ ಅಲ್ಲಿಯ ದೊರೆ. ಗೋವಿಂದ ಸಾಬು ಅವನ ಮಂತ್ರಿ. 1978ನೇ ಇಸವಿ ಫೆಬ್ರುವರಿ ತಿಂಗಳ 30ನೇ ತಾರೀಕು ನಡುರಾತ್ರಿ ಸಮೀಪಿಸಿತ್ತು. ಕೋಳಿ 'ಕೊಕ್ಕೊಕ್ಕೋ...' ಎಂದು ತಾರಕಸ್ವರದಲ್ಲಿ ಕೂಗಿದಾಕ್ಷಣ ರಾಜ ಗಡಬಡಿಸಿ ಎದ್ದ. ಅದೇನೋ ಕಸಿವಿಸಿ, ಏನೋ ಅತೃಪ್ತಿ. ಮನಸ್ಸು ಗೊಂದಲದ ಗೂಡಾಗಿದೆ. ತನಗೆ ಶಾಂತಿಯ ಅಗತ್ಯವಿದೆ ಎನಿಸಿತು. ರಾಜನಿಗೆ ತಕ್ಷಣ ಮಂತ್ರಿ ಹುಸೇನ ಸಾಬನನ್ನು ಕರೆಸಿ 'ಶಾಂತಿ ಬೇಕು' ಎಂದ!

ಮಂತ್ರಿ ತಲೆ ಕೆರೆದ. ಅವನ ಬೋಳು ತಲೆಯಿಂದ ದಂಡಿಯಾಗಿ ಕೂದಲು ಉದುರಿದವೇ ವಿನಃ ಉಪಾಯ ಹೊಳೆಯಲಿಲ್ಲ. ಕೊನೆಗೆ ನಿರ್ವಿಣ್ಣನಾಗಿ 'ಪ್ರಭು, ಅದು ನನ್ನ ಬಳಿಯಿಲ್ಲ, ನಮ್ಮ ಅರಮನೆಯಲ್ಲಿಯೂ ಇಲ್ಲ, ನಮ್ಮ ಪ್ರಜೆಗಳಲ್ಲಿ ಯಾರ ಬಳಿಯಲ್ಲಾದರೂ ದೊರೆಯಬಹುದು, ತಪಶೀಲು ನಡೆಸೋಣವೇ' ಎಂದು ಯಾಚಿಸಿದ.

ರಾಜನಿಗೆ ಅದೇ ಸರಿ ಕಂಡಿತು. 'ನಿಜ, ನಮ್ಮ ಪ್ರಜೆಗಳ ಬಳಿ ಶಾಂತಿಯ ದಾಸ್ತಾನಿದ್ದರೂ ಇರಬಹುದು. ಒಂದೆರಡು ಕೇಜಿಯಷ್ಟು ಎರವಲು ಪಡೆಯುತ್ತೇನೆ' ಎಂದವನೇ ತನ್ನ 5 ಕಾಲಿನ ಕುದುರೆಯನ್ನೇರಿ ಊರಿನೊಳಗೆ ಹೋಗಲು ದೌಡಾಯಿಸಿದ. ಕುದುರೆ ತನ್ನ ಸೊಂಡಿಲನ್ನು ಅತ್ತ ಇತ್ತ ಹಾವಿನಂತೆ ಹೆಡೆಯಾಡಿಸುತ್ತಾ ನಾಗಾಲೋಟದಿಂದ ಓಡಿತು. ಮಾರ್ಗ ಮಧ್ಯದಲ್ಲಿ ಒಬ್ಬ ಭಿಕ್ಷುಕ ಇವನನ್ನು ಕಂಡು ತಡೆದು ನಿಲ್ಲಿಸಿ 'ಅಯ್ಯಾ, ನಾನೊಬ್ಬ ಕುರುಡ, ನನ್ನನ್ನು ಮಾತಾಡಿಸದೇ ಹೋಗುತ್ತಿರುವಿಯಲ್ಲ?' ಎಂದ. ರಾಜ ಶಾಂತಿಯ ಕುರಿತು ಅವನಲ್ಲಿ ವಿಚಾರಿಸಿದ. ಭಿಕ್ಷುಕ ತನ್ನಲ್ಲಿಲ್ಲವೆಂದು ತಲೆಯಾಡಿಸಿದ. ರಾಜ ಅವನನ್ನು ಬಯ್ದುಕೊಳ್ಳುತ್ತಾ ಮುಂದೆ ಸಾಗಿದ.

ಬೇಸಿಗೆ ಕಾಲ. ಸಣ್ಣಗೆ ಮಳೆ ಜಿನುಗುತ್ತಿತ್ತು. ತಡೆಯಲಾರದ ಚಳಿ ಬೇರೆ. ನಡು ಮಧ್ಯಾಹ್ನ ಆಗಸದಲ್ಲಿ ಅಮಾವಾಸ್ಯೆಯ ಚಂದ್ರ ಇವನನ್ನು ಅಣಕಿಸುವಂತೆ ಹೊಂಬಣ್ಣದಲ್ಲಿ ಕಂಗೊಳಿಸುತ್ತ ದಕ್ಷಿಣದಿಂದ ಪೂರ್ವದ ಪರ್ವತಗಳೆಡೆಗೆ ಸಾಗಿದ್ದ.

ಕುದುರೆ ಬಾಯಾರಿಕೆಯಿಂದ ಬಳಲಿದಂತಿತ್ತು. ರಾಜನೂ ಬಾಯಾರಿದ್ದ, ನೀರಿಗಾಗಿ ಅತ್ತಿತ್ತ ನೋಡಲು ಅನತಿ ದೂರದಲ್ಲಿ ಒಂದು ಸಣ್ಣ ಹಳ್ಳ ತೋರಿತು. ಹಳ್ಳದಲ್ಲಿ ಕಾಲಿಡಲೂ ಭಯವಾಗುವಂತಿತ್ತು. ಭಯಂಕರ ಶಾರ್ಕ್‌ಗಳೂ, ಭಾರೀ ತಿಮಿಂಗಿಲಗಳೂ ಎಲ್ಲೆಡೆ ಈಜಾಡುತ್ತಿದ್ದವು. ಮೊಸಳೆಗಳು ದಂಡೆಯುದ್ದಕ್ಕೂ ಸ್ವಚ್ಛಂದವಾಗಿ ಬಿಸಿಲು ಕಾಯಿಸುತ್ತ ಮಲಗಿದ್ದವು.

ನಮ್ಮ ಬಹದ್ದೂರ್ ರಾಜ ಬೆದರಲಿಲ್ಲ. ಮೊಸಳೆಗಳ ಬೆನ್ನ ಮೇಲೆ ತನ್ನ ಭಾರವಾದ ಹೆಜ್ಜೆಗಳನ್ನೂರಿ ಸದ್ದಾಗದಂತೆ ಸಾಗಿ ಹಳ್ಳದಲ್ಲಿಳಿದು ತಿಮಿಂಗಿಲಗಳನ್ನು ಬದಿಗೆ ಸರಿಸಿ ಶಾರ್ಕ್‌ಗಳನ್ನು ಅತ್ತಿತ್ತ ತಳ್ಳಿ ಮನಸಾರೆ ನೀರನ್ನು ಹೀರಿದ. ಕುದುರೆಗೂ ಹೊಟ್ಟೆ ಬಿರಿಯುವಷ್ಟು ಕುಡಿಸಿದ.

ಈ ಬಾರಿ ಕುದುರೆಗೆ ಭಾರೀ ಶಕ್ತಿ ಸಂಚಯಿಸಿತ್ತು. ರಾಜ ಹಿಂದು ಮುಂದಾಗಿ ಕುಳಿತು ಕುದುರೆ ಓಡಿಸಿದ. ದಾರಿಯಲ್ಲಿ ಒಬ್ಬ ವ್ಯಕ್ತಿ ಹಾಲು ಕರೆಯುತ್ತಾ ಕುಳಿತಿದ್ದ. ರಾಜ ಅವನ ಬಳಿ ಸಾಗಿ 'ಅಣ್ಣಾ, ನನಗೆ ಶಾಂತಿ ಬೇಕಾಗಿದೆ, ನೀನು ಕೊಡಬಲ್ಲೆಯಾ?' ಎಂದ.

ಆ ವ್ಯಕ್ತಿ ಮೂಗಿನಿಂದ ಗಳಗಳನೆ ನಕ್ಕು ಹೇಳಿದ. 'ಮಹಾನುಭಾವ, ನಾನೊಬ್ಬ ಹುಟ್ಟುಮೂಗ. ಬೇಕಾದರೆ ಹಾಲು ನೀಡಬಲ್ಲೆನೇ ವಿನಃ ಶಾಂತಿ ನೀಡಲಾರೆ' ಎಂದು ತಾನು ಕರೆಯುತ್ತಿದ್ದ ಕೋಣದ ಹಾಲನ್ನು ಹಾಗೂ ಹುಂಜದ ಮೊಟ್ಟೆಗಳನ್ನು ನೀಡಿದ. ರಾಜ ತಿಂದು ಥರ್‍ರೆಂದು ತೇಗಿದ. ಕೊಂಚ ವಿಶ್ರಾಂತಿಯ ನಂತರ ಪುನಃ ಕುದುರೆಯೇರಿ ಸಾಗಿದ. ಅವನಿಗಾಗಲೇ ನಿರಾಸೆಯಾಗಲಾರಂಭಿಸಿತ್ತು. ಬೇಸಿಗೆಯ ಚಳಿಗಾಳಿ, ಇಬ್ಬನಿಯಾಗಲಿ ಅವನಿಗೆ ಚೇತನದಾಯಕವಾಗಿರಲಿಲ್ಲ. ಅಷ್ಟರಲ್ಲಿ ಅವನಿಗೊಂದು ಬೃಹದಾಕಾರದ ಗುಡಿಸಲು ಕಂಡಿತು. ಹೊರಗೆ ಭಾರೀ ತುಳಸಿಮರ. ಕೊಂಬೆಗೆರಡರಂತೆ ಸೋರೆಕಾಯಿಗಳು ಇಳಿಬಿದ್ದಿದ್ದವು. ಇಳಿದು ಒಂದನ್ನು ಒಡೆದು ನೋಡಿದ. ಒಳಗೆ ಬರೀ ಗೊರಟು.

ಗುಡಿಸಲಿನ ಹೊರಗೊಬ್ಬ ಮುದುಕ ಕುಳಿತಿದ್ದ. ಸುಮಾರು 12 ವರ್ಷದವನಿರಬೇಕು. ತಲೆ ತುಂಬಾ ಬಿಳಿಕೂದಲು, ಗೋಲಿ ಆಡುತ್ತಾ ಕುಳಿತಿದ್ದ, ರಾಜ ಅವನ ಬಳಿ ಸಾರಿ ಕೇಳಿದ 'ಅಯ್ಯಾ ಮುದುಕ, ನನಗೆ ಶಾಂತಿ ಬೇಕಾಗಿದೆ, ಕೊಡಬಲ್ಲೆಯಾ?'

ಮುದುಕ ಸಣ್ಣಗೆ ನಕ್ಕು ಒಳಹೋದ. ಕ್ಷಣಾರ್ಧದಲ್ಲಿ ಒಬ್ಬ ಹುಡುಗಿಯನ್ನು ಕರೆತಂದ. ಅವಳ ಕಪ್ಪು ಬಣ್ಣ, ದಢೂತಿ ದೇಹ, ಮುಖದ ತುಂಬಾ ಮೊಡವೆಗಳು. ರಾಜ ಅವಳ ಸೌಂದರ್ಯರಾಶಿಗೆ ಮರುಳಾಗಿಬಿಟ್ಟ.

ಮುದುಕ ಹೇಳಿದ 'ರಾಜನ್ ಇವಳು ನನ್ನ ಮಗಳು ಶಾಂತಿ, ವಯಸ್ಸು ಬರೀ 40, ಇವಳನ್ನು ಸ್ವೀಕರಿಸು' ರಾಜನ ಅತೃಪ್ತಿ ಕಸಿವಿಸಿ, ಹಪಹಪಿ ಎಲ್ಲವೂ ಮಾಯವಾಗಿ ಆಸ್ಥಾನದಲ್ಲಿ ನೆಮ್ಮದಿ ನೆಲೆಸಿತ್ತು!

ಶಾಂತಿಯ ಕೈ ಹಿಡಿದ ರಾಜ ಪುನಃ ರಾಜಧಾನಿಯೆಡೆಗೆ ಕುದುರೆಯೇರಿ ಪಯಣಿಸಿದ. ಆಗಲೇ ರಾತ್ರಿಯಾಗಿತ್ತಾ ಬಂದಿತ್ತು. ಸೂರ್ಯ ಪ್ರಕಾಶಿಸುತ್ತಾ ಇವನನ್ನು ಸ್ವಾಗತಿಸುತ್ತಿದ್ದ.

(ಈಗ ನಿಮ್ಮ ಬುದ್ಧಿವಂತಿಕೆಗೆ ಒಂದು ಸವಾಲು. ಈ ಕಥೆಯಲ್ಲಿ ಎಷ್ಟು ಅವಾಸ್ತವಗಳಿವೆ, ಕಂಡುಹಿಡಿಯಬಲ್ಲಿರಾ?)

■